**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಡೂರು**

# ಓ.ಎಸ್.597/2017

**ಃಮಧ್ಯಕಾಲೀನ ಅರ್ಜಿ ಸಂಖ್ಯೆ.9 ರ ಮೇಲಿನ ವಿಚಾರಣೆಃ(2 ನೇ ವಾದಿಯು ಮಾನಸಿಕ ಅಸ್ವಸ್ಥಳಾಗಿರುವ ಕುರಿತು ವೈದ್ಯರ ಸಾಕ್ಷ್ಯ)**

| | | | |
|---|---|---|---|
| ಸಾಕ್ಷಿದಾರರ ಹೆಸರು | ಡಾ.ಚಂದ್ರಶೇಖರ್ ಎಂ. | ಪ್ರಮಾಣ ಮಾಡಿದ ದಿನಾಂಕ | 28.06.2023 |
| ತಂದೆಯ ಹೆಸರು | ಮುತ್ತಯ್ಯ | | |
| ವಯಸ್ಸು | 53 ವರ್ಷ | | |
| ವೃತ್ತಿ | ವೈದ್ಯಾಧಿಕಾರಿಗಳು,ಮಾನಸಿಕ ಆರೋಗ್ಯ ತಜ್ಞ,ಅರಳುಗಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆ ಚಿಕ್ಕಮಗಳೂರು | ಸಿ.ಡಬ್ಲ್ಯು | 1 |
| ವಾಸಸ್ಥಳ | ಚಿಕ್ಕಮಗಳೂರು | | |

**ಮುಖ್ಯ ವಿಚಾರಣೆ :ವಾದಿ ಪರ ವಕೀಲರಿಂದಃ**

ನಾನು ಮಾನಸಿಕ ಆರೋಗ್ಯ ತಜ್ಞನಾಗಿ ಅರಳುಗಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆ ಚಿಕ್ಕಮಗಳೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ18.01.2021 ರಂದು 3 ನೇ ವಾದಿಯೊಂದಿಗೆ 2 ನೇ ವಾದಿಯು ನಮ್ಮ ಅಸ್ಪತ್ರೆಗೆ ಬಂದಿದ್ದು, ಅವರನ್ನು ಪರೀಕ್ಷಿಸಲಾಗಿ ಅವರಿಗೆ ಶೇಕಡ 90 ರಷ್ಟು ಬುದ್ಧಿ ಮಾಂದ್ಯತೆ ಇರುವುದು ಕಂಡುಬಂತು. ಅದೇ ದಿನ ಬುದ್ಧಿಮಾಂದ್ಯತೆ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ಪ್ರಮಾಣಪತ್ರದ ಅಟೆಸ್ಟೆಡ್ ಕಾಪಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಸಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ಬುದ್ಧಿಮಾಂದ್ಯರಿಗೆ ಸಂಬಂಧಿಸಿದಂತೆ ನೀಡುವ ಪ್ರಮಾಣಪತ್ರದ ಕಡತವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅದರಲ್ಲಿ 2 ನೇ ವಾದಿಗೆ ಸಂಬಂಧಿಸಿದಂತೆ ಪ್ರಮಾಣಪತ್ರವನ್ನು ನೀಡಿದ ಕುರಿತು ನಮೂದು ಇದ್ದು, ಸದರಿ ಭಾಗವನ್ನು ನಿಸಿ-2

ಎಂದು ಗುರುತಿಸಲಾಯಿತು.

**ಪಾಟೀ ಸವಾಲು :- 9 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ಮಾನಸಿಕ ತಜ್ಞವೈದ್ಯನಾಗಿರುತ್ತೇನೆ. 2 ನೇ ವಾದಿಯು ಪ್ರಮಾಣಪತ್ರವನ್ನು ನೀಡುವ ಮೊದಲು ನನ್ನ ಬಳಿ ಚಿಕಿತ್ಸೆಗೆ ಬಂದಿರುವುದಿಲ್ಲ. 2 ನೇ ವಾದಿಯನ್ನು ಪರೀಕ್ಷಿಸದೇ ಅವರ ಕೋರಿಕೆಯಂತೆ ಬುದ್ಧಿಮಾಂದ್ಯತೆ ಪ್ರಮಾಣಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ/-

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಕಡೂರು